# <u>ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ.649/2025</u>

<u>ಸಾಕ್ಷಿದಾರರ ಹೇಳಿಕೆಃ</u>

| | | |
|---|---|---|
| ಹೆಸರು | : | ಬಸವಲಿಂಗಪ್ಪ ಚಿಮ್ಮಲಗಿ ಚಾಸಾಃ **6** ಪ್ರಾಸಾಃ **1** |
| ತಂದೆಯ  ಹೆಸರು | : | ನಂಜಪ್ಪ |
| ವಯಸ್ಸು | : | **51** ವರ್ಷ |
| ವೃತ್ತಿ | : | ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : | ಬಾಗಲಕೋಟೆ |

ದಿನಾಂಕಃ **06-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಸಾಕ್ಷಿಯ ಹೇಳಿಕೆಯನ್ನು video conference ಮೂಲಕ ತೆಗೆದುಕೊಳ್ಳಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ</u>

ನಾನು ಫೆಬ್ರವರಿ 2022 ರಿಂದ ಸೆಪ್ಟೆಂಬರ್ 2025 ರವರೆಗೆ ಹೊನ್ನಾಳಿ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕಃ 23-10-2024 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದುಕೊಂಡು ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ನಂತರ ದಿಃ 28-10-2024 ರಂದು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮು.ಮಾ.1 ಅನ್ನು ರಾಸಾಯನಿಕ ಪರೀಕ್ಷೆಗೆ ಚಾಸಾ-3 ರವರ ಮುಖಾಂತರ

ಮನವಿ ಪತ್ರದೊಂದಿಗೆ ಚಾಸಾ-4 ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 29-11-2024 ರಂದು ರಾಸಾಯನಿಕ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ 14-11-2024 ರಂದು ಚಾಸಾ-3 ರವರು ದಾಳಿಯಲ್ಲಿ ಭಾಗಿಯಾದ ಬಗ್ಗೆ ಮತ್ತು ದಿಃ 29-11-2024 ರಂದು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋದ ಬಗ್ಗೆ ಹೇಳಿಕೆಯನ್ನು ಪಡೆದದುಕೊಂಡಿರುತ್ತೇನೆ. ದಿಃ 14-11-2024 ರಂದು ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 20-10-2024 ರಂದು ಚಾಸಾ-5 ರವರನ್ನು ಆರೋಪಿಯ ಪತ್ತೆಗಾಗಿ ನೇಮಕ ಮಾಡಿರುತ್ತೇನೆ. ದಿಃ 30-10-2024 ರಂದು ಚಾಸಾ-5 ರವರು ಆರೋಪಿಯು ಪತ್ತೆಯಾಗದ ಬಗ್ಗೆ ವರದಿಯನ್ನು ನೀಡಿರುತ್ತಾರೆ.

ದಿಃ 04-11-2024 ರಂದು ಚಾಸಾ-3 ರವರನ್ನು ಆರೋಪಿಯ ಪತ್ತೆಗಾಗಿ ನೇಮಕ ಮಾಡಿರುತ್ತೇನೆ. ದಿಃ 06-11-2024 ರಂದು ಚಾಸಾ-3 ರವರು ಆರೋಪಿಯು ಪತ್ತೆಯಾಗದ ಬಗ್ಗೆ ವರದಿಯನ್ನು ನೀಡಿರುತ್ತಾರೆ. ನಂತರ ತನಿಖೆಯಿಂದ ಆರೋಪಿಯ ವಿರುದ್ಧ ಆರೋಪ ಸಾಭೀತಾಗಿದ್ದರಿಂದ, ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಮದ್ಯದ ಪೌಚ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ಎಂದು ಗುರುತಿಸಲಾಯಿತು.

ಚಾಸಾ-4 ರವರಿಗೆ ನೀಡಿದ ನಿವೇದನೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ರಾಸಾಯನಿಕ ವರದಿಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಆರೋಪಿಯ ಪತ್ತೆಗಾಗಿ ನೇಮಕ ಮಾಡಿದ ಜ್ಞಾಪನ ಪತ್ರವನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಚಾಸಾ-5 ರವರು ನೀಡಿದ ವರದಿಯನ್ನು ನಿಪಿ-4 ಎಂದು, ಚಾಸಾ-3 ರವರನ್ನು ಆರೋಪಿಯ ಪತ್ತೆಗಾಗಿ ನೇಮಕ ಮಾಡಿದ ಪತ್ರವನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಚಾಸಾ-3 ರವರು ನೀಡಿದ ವರದಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :- ಆರೋಪಿ ಪರ ವಕೀಲರರಿಂದ :-</u>

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮು.ಮಾ.1 ಅನ್ನು ರಾಸಾಯನಿಕ ಪರೀಕ್ಷೆಗೆ ಚಾಸಾ-3 ರವರ ಮುಖಾಂತರ ಮನವಿ ಪತ್ರದೊಂದಿಗೆ ಚಾಸಾ-4 ರವರಿಗೆ ಕಳುಹಿಸಿಕೊಟ್ಟಿಲ್ಲ ಮತ್ತು ರಾಸಾಯನಿಕ ವರದಿಯನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-3 ರವರು ದಾಳಿಯಲ್ಲಿ ಭಾಗಿಯಾದ ಬಗ್ಗೆ ಮತ್ತು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋದ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-3 ಮತ್ತು 5 ರವರನ್ನು ಆರೋಪಿಯ ಪತ್ತೆಗಾಗಿ ನೇಮಕ ಮಾಡಿಲ್ಲ ಮತ್ತು ಚಾಸಾ-3 ಮತ್ತು 5 ರವರು ಆರೋಪಿಯು ಪತ್ತೆಯಾಗದ ಬಗ್ಗೆ ವರದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾ.1 ಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಮ್ಮ ಠಾಣೆಯಲ್ಲಿದ್ದ ಬೇನಾಮಿ ಮಾಲನ್ನು ಈ ಪ್ರಕರಣದಲ್ಲಿ ಸೇರಿಸಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಮು.ಮಾ.1 ಸಾಮಾನ್ಯವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ದೊರೆಯುತ್ತದೆ ಎಂದರೆ ಸರಿ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.